

## ಜಂಜೀರಿಗೆ ಕಾಯಿ

ಇದನ್ನು ತಕ್ಷಣ ನೋಡಿದಾಗ ಅಡಿಕೆ ಕಾಯಿಯಂತೆ ಕಾಣುತ್ತದೆ. ಆದರೆ, ಅಡಿಕೆ ಕಾಯಿ ಅಲ್ಲ. ಇದು ಮಲೆನಾಡ ಕಾಡುಗಳಲ್ಲಿ ಸಿಗುವಂತಹ ಜಂಜೀರಿಗೆ ಕಾಯಿ. ಹೋಲಿಕೆಯಲ್ಲಿ ಬರೀ ಕಾಯಿ ಮಾತ್ರವಲ್ಲ, ಇದರ ಮರವು ಸಹ ಅಡಿಕೆ ಮರವನ್ನೇ ಹೋಲುತ್ತದೆ. ಬಹಳ ಆಕರ್ಷಕವಾದ ಈ ಕಾಯಿಗಳನ್ನು ಅಲಂಕಾರಕ್ಕೆ ಬಳಸಲಾಗುತ್ತದೆ.

ಹಿಂದಿನ ಕಾಲದಿಂದಲೂ ಮಲೆನಾಡಿನಲ್ಲಿ ಮದುವೆ ಮನೆಯ ಚಪ್ಪರ, ಅಡಿಕೆ ಒಣಗಿಸಲು, ಮನೆಯ ಮುಂದೆ ನೆರಳಿಗೆ ಚಪ್ಪರಕ್ಕೆ ಇದೇ ಮರವನ್ನು ಬಳಸಲಾಗುತ್ತದೆ. ಗದ್ದೆ ತೋಟದ ಸುತ್ತ, ಮನೆಯ ಸುತ್ತ, ಪ್ರಾಣಿ ಪಕ್ಷಿಗಳಿಂದ ಬೆಳೆಯನ್ನು ರಕ್ಷಿಸಲು ಬೇಲಿಯ ರೂಪದಲ್ಲಿ ಈ ಮರವನ್ನು ಉಪಯೋಗಿಸಲಾಗುತ್ತದೆ. ಈಗಿನ ಮಾರುಕಟ್ಟೆಯಲ್ಲಿ ಸಿಗುವಂತಹ ಯಾವುದೇ ಅಲಂಕಾರಿಕ ವಸ್ತುಗಳು, ಸಿಗದಿರುವ ಆಗಿನ ಕಾಲದಲ್ಲಿ ಇದೇ ಮರದ ಎಲೆಗಳು ಅಥವಾ ಗರಿಗಳು ಅಲಂಕಾರಕ್ಕೆ ಹೆಚ್ಚು ಉಪಯೋಗವಾಗುತ್ತಿದ್ದವು. ಒಟ್ಟಿನಲ್ಲಿ ಮಲೆನಾಡಿಗರ ದಿನನಿತ್ಯದ ಜೀವನದಲ್ಲಿ ಈ ಜಂಜೀರಿಗೆ ಮರ ಬಹಳ ಅವಶ್ಯಕವಾಗಿದೆ. ಈಗ ಈ ಜಾತಿಯ ಸಸ್ಯ ವಿನಾಶದ ಅಂಚಿನಲ್ಲಿದೆ.

–ಜಯಂತಿ ರಾಘವೇಂದ್ರ, ಆಗುಂಬೆ

## ತಿರುಪತಿ ದೇವರ ಮುಡಿಪು

ಕರಾವಳಿಯ ಬಹುತೇಕ ಮನೆಗಳಲ್ಲಿ ವರ್ಷಕ್ಕೊಮ್ಮೆ ತಿರುಪತಿ ದೇವರಿಗೆ ಮನೆಯ ಎಲ್ಲರೂ ಮುಷ್ಟಿ ಕಾಣಿಕೆ ತೆಗೆದಿಟ್ಟು 'ಮುಡಿಪು ಕಟ್ಟುವ' ಸಂಪ್ರದಾಯ ಈಗಲೂ ಇದೆ. ಉಳ್ಳವರ ಮನೆಗಳಲ್ಲಿ ಭದ್ರವಾದ ತಾಮ್ರದ ಪೆಟ್ಟಿಗೆಯಲ್ಲಿ ಈ ಮುಡಿಪಿನ ಹಣವನ್ನು ತೆಗೆದಿಡುತ್ತಿದ್ದರೆ, ಬಡವರ ಮನೆಗಳಲ್ಲಿ ಬೆತ್ತವನ್ನು ಸೀಳಿ ಅದರ ಎಳೆಗಳಿಂದ ಹೆಣೆದ ಬುಟ್ಟಿಯಂತಹ ಭದ್ರವಾದ ಪೆಟ್ಟಿಗೆಯಲ್ಲಿ ಹಣ ಸಂಗ್ರಹಿಸಲಾಗುತ್ತಿತ್ತು. ಇದಕ್ಕೆ ಬೀಗ ಹಾಕಬಹುದಿತ್ತು. ಬೆತ್ತದ ಮುಡಿಪಿನ ಬಳಕೆ ಈಗ ಕಡಿಮೆಯಾಗಿ ಮೂಲೆ ಸೇರಿದೆ. ಮಡಂತ್ಯಾರಿನ ರವಿಶಂಕರ ಭಟ್ಟರ ಸಂಗ್ರಹದಲ್ಲಿ ಇಂತಹ ಮುಡಿಪಿನ ಪೆಟ್ಟಿಗೆ ಸೇರಿಕೊಂಡಿದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಬಿಡಿಭಾಗಗಳ ಎತ್ತಿನಗಾಡಿಯ ಕಲಾಕೃತಿ

ಆಟೊಮೊಬೈಲ್ ಬೇರಿಂಗ್, ಗೇರ್‌ಗಳನ್ನು ಹಾಗೂ ಇತರೆ ಬಿಡಿಭಾಗಗಳನ್ನು ಬಳಸಿ ನಿರ್ಮಿಸಿರುವ ಎತ್ತಿನಗಾಡಿ ಶಿಲ್ಪವು ಸಂಸ್ಕೃತಿ ಮತ್ತು ತಂತ್ರಜ್ಞಾನವನ್ನು ಒಂದುಗೂಡಿಸಿದೆ. ಅಂದಿನ ಕಾಲದ ಸಾರಿಗೆ ಸಾಧನವಾಗಿದ್ದ ಎತ್ತಿನಗಾಡಿ, ಜೋಡೆತ್ತುಗಳು ಇವೆಲ್ಲವೂ ಯಂತ್ರಗಳ ಬಿಡಿ ಭಾಗಗಳಿಂದ ಇಲ್ಲಿ ರೂಪುಗೊಂಡಿರುವುದು ವಿಶೇಷ. ಈ ಕಲಾಕೃತಿ ನಗರಕ್ಕೆ ಅಲಂಕಾರ ಮಾತ್ರವಲ್ಲ, ಯುವಪೀಳಿಗೆಗೆ ಪಾಠವೂ ಆಗುತ್ತದೆ. ನಮ್ಮ ಪಾರಂಪರಿಕ ಬದುಕಿನ ಸ್ಮರಣೆ, ರೈತನ ಶ್ರಮಕ್ಕೆ ಗೌರವ ಮತ್ತು ತಂತ್ರಜ್ಞಾನವನ್ನು ಕಲಾತ್ಮಕವಾಗಿ ಬಳಸುವ ಸೃಜನಶೀಲತೆಯನ್ನು ಇದು ಒಳಗೊಂಡಿದೆ. ಚಿಕ್ಕಬಳ್ಳಾಪುರ ನಗರದ ಶನಿಮಹಾತ್ಮ ಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಈ ಕಲಾಕೃತಿ ಸಂಸ್ಕೃತಿ ಮತ್ತು ಇಂದಿನ ಯಂತ್ರಯುಗದ ಸಂಗಮವಾಗಿದ್ದು, ಈ ಶಿಲ್ಪವು ಎಲ್ಲರ ಗಮನಸೆಳೆಯುತ್ತಿದೆ.

–ಜಿ. ಪದ್ಮಾ, ಸಂಡೂರು

